ಈ) ಪುನರ್ ಆಡಿಟ್ ಮಾಡಿದ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳಲ್ಲಿ ಯಾವ ಲೋಪದೋಷಗಳನ್ನು ಕಂಡು ಹಿಡಿಯಲಾಗಿದೆ? ಹಾಗೂ ಈ ಬಗ್ಗೆ ತೆಗೆದುಕೊಳ್ಳಲಾಗಿರುವ ಕ್ರಮಗಳೇನು?

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ.

ಉ) ಕಳೆದ 3 ವರ್ಷಗಳಿಂದ ವರ್ಷವಾರು ಆಡಿಟ್ ಮಾಡಿದ ತಾಲ್ಲೂಕು ಮಟ್ಟದ ಕಾರ್ಯವ್ಯಾಪ್ತಿಯ ಸಹಕಾರ ಸಂಘಗಳ ಪೈಕಿ ಪುನರ್ ಆಡಿಟ್ ಮಾಡಲಾದ ಸಹಕಾರ ಸಂಘಗಳಲ್ಲಿ ಮೂಲ ಆಡಿಟ್‌ನಲ್ಲಿಲ್ಲದ ಲೋಪದೋಷಗಳು ಕಂಡು ಬಂದಿದ್ದಲ್ಲಿ, ಆಡಿಟ್ ಮಾಡಿದ ಅಧಿಕಾರಿಗಳ ಹಾಗೂ ಮೇಲ್ವಿಚಾರಣೆ ಮಾಡಿದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಪುನರ್ ಆಡಿಟ್ ನಡೆಯದೇ ಇರುವುದರಿಂದ ಅನ್ವಯಿಸುವುದಿಲ್ಲ.

ಸಂಖ್ಯೆ: ಸಿಓ 42 ಸಿಎಲ್‌ಎಂ 2009

ಸಹಿ/–
(ಲಕ್ಷ್ಮಣ. ಸ. ಸವದಿ)
ಸಹಕಾರ ಸಚಿವರು.

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ
13ನೇ ವಿಧಾನಸಭೆ 2ನೇ ಅಧಿವೇಶನ

421 ಶ್ರೀ.ಎನ್.ಸಂಪಂಗಿ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.

ಅ) ಕೋಲಾರ ಜಿಲ್ಲೆಯಲ್ಲಿ ಗುರುತಿಸಲಾದ ಸ್ವಸಹಾಯ ಮತ್ತು ಸ್ತ್ರೀಶಕ್ತಿ ಗುಂಪುಗಳ ಸಂಖ್ಯೆ ಎಷ್ಟು; ಅವರುಗಳಿಗೆ ನೀಡಿರುವ ಯೋಜನೆಗಳಾವುವು;

ಇಲಾಖೆಯಿಂದ ಜಾರಿಗೊಳಿಸಲಾಗುತ್ತಿರುವ ಸ್ತ್ರೀಶಕ್ತಿ ಯೋಜನೆಯಡಿ 3936 ಗುಂಪುಗಳನ್ನು ಕೋಲಾರ ಜಿಲ್ಲೆಯಲ್ಲಿ ರಚಿಸಲಾಗಿದೆ. ಜಿಲ್ಲೆಯಲ್ಲಿ ರಚಿಸಲಾಗಿರುವ ಇತರೆ ಸ್ವಸಹಾಯ ಗುಂಪುಗಳು ಈ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ. ಯೋಜನೆಯ ವ್ಯಾಪ್ತಿಗೆ ಒಳಪಟ್ಟಂತೆ ಗುಂಪುಗಳು ಉತ್ತಮವಾಗಿ ನಿರ್ವಹಿಸಲು ಅಗತ್ಯವಿರುವ ವಿವಿಧ ತರಬೇತಿಗಳನ್ನು ನೀಡಲಾಗಿದ್ದು, ರಚನೆಯಾದ 3936 ಗುಂಪುಗಳಿಗೆ ತಲಾ ರೂ.5000/– ರಂತೆ ಸುತ್ತುನಿಧಿ ನೀಡಲಾಗಿದೆ. ವಿವಿಧ ಕೌಶಲ್ಯಗಳ ಅಭಿವೃದ್ಧಿಗೆ ತರಬೇತಿ, ಅಧಿಕ ಉಳಿತಾಯ ಮಾಡಿದ ಗುಂಪುಗಳಿಗೆ ಪ್ರೋತ್ಸಾಹ ಧನ ಆದಾಯೋತ್ಪನ್ನ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿರುವ ಗುಂಪುಗಳಿಗೆ ಪ್ರೋತ್ಸಾಹ ಧನ, ಗುಂಪುಗಳು ಉತ್ಪಾದಿಸುವ ವಸ್ತುಗಳಿಗೆ

ಮಾರುಕಟ್ಟೆ ಸೌಲಭ್ಯ ಅಲ್ಲದೆ ವಿವಿಧ ಇಲಾಖೆಗಳ ಯೊಜನೆಗಳ ಈ ಕೆಳಕಂಡ ಸೌಲಭ್ಯಗಳನ್ನು ಅವರಿಗೆ ನೀಡಲಾಗಿದೆ.

1] ಹೈನುಗಾರಿಕೆ, 2] ರೇಷ್ಮೆ ಹುಳು ಸಾಕಾಣಿಕೆ, 3] ಎಸ್.ಜೆ.ಎಸ್.ವೈ.
4] ಮೈಕ್ರೋ ಕ್ರೆಡಿಟ್, 5] ನ್ಯಾಯಬೆಲೆ ಅಂಗಡಿಗಳು, 6] ಗಿರಣಿ, 7] ಶಕ್ತಿಯುತ ಆಹಾರ ತಯಾರಿಕೆ ತರಬೇತಿ, 8] ಹೊಲಿಗೆ ತರಬೇತಿ, 9] ಫ್ಯಾಷನ್ ಡಿಸೈನ್ ತರಬೇತಿ.

ಆ) 2007–08ನೇ ಸಾಲಿನಲ್ಲಿ ಇದುವರೆವಿಗೂ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ಸ್ತ್ರೀಶಕ್ತಿ ಗುಂಪುಗಳಿಗೆ ನೀಡಿದ ಮೊತ್ತವೆಷ್ಟು; ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಮ್ಮಿಕೊಂಡಿರುವ ಯೋಜನೆಗಳಾವುವು;

ಸಕಾರದಿಂದ 2007–08ನೇ ಸಾಲಿನಲ್ಲಿ ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರದಲ್ಲಿ ರಚನೆಯಾದ ಸ್ತ್ರೀಶಕ್ತಿ ಗುಂಪುಗಳಿಗೆ ಒಟ್ಟು ರೂ.17.50ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ಈ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ 80 ಸದಸ್ಯರಿಗೆ ಪುಸ್ತಕ ನಿರ್ವಹಣೆ ತರಬೇತಿ, 480 ಸದಸ್ಯರಿಗೆ ಓರಿಯಂಟೇಷನ್ ತರಬೇತಿ, 25 ಸದಸ್ಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ, 5 ಸಂಘಗಳಿಗೆ ಬ್ಯಾಂಕ್‌ನಿಂದ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

2008–09ನೇ ಸಾಲಿನಲ್ಲಿ ರೂ.22.415 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ. 2008–09ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಗುಂಪಿನ 25 ಸದಸ್ಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ ನೀಡಲಾಗಿದೆ. 7 ಗುಂಪುಗಳಿಗೆ ಬ್ಯಾಂಕ್‌ನಿಂದ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

2008–09ನೇ ಸಾಲಿನಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು ಬ್ಯಾಂಕ್‌ನಿಂದ ಪಡೆದ ಸಾಲ ಕನಿಷ್ಠ ರೂ.25000/–ದಿಂದ ಗರಿಷ್ಠ ರೂ.1.00ಲಕ್ಷಕ್ಕೆ ಹೊಸ ಯೋಜನೆಯಡಿ ಶೇ.6ರ ಬಡ್ಡಿ ಸಹಾಯ ಧನ ಇಲಾಖೆಯಿಂದ ಭರಿಸಲಾಗುವುದು.

ಇ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಎಷ್ಟು ಜನ ಅಂಗವಿಕಲರನ್ನು ಗುರುತಿಸಲಾಗಿದೆ; ಹಾಗಿದ್ದಲ್ಲಿ, ಹಮ್ಮಿಕೊಂಡಿರುವ ಕಾರ್ಯ ಚಟುವಟಿಕೆಗಳಾವುವು; (ತಾಲ್ಲೂಕುವಾರು ವಿವರ ನೀಡುವುದು)?

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 25274 ಅಂಗವಿಕಲರನ್ನು ಗುರುತಿಸಲಾಗಿದೆ. ಅದರಂತೆ ಅಂಗವಿಕಲರಿಗೆ ಸಾಧನೆ ಸಲಕರಣೆ, ಆಧಾರ ಯೊಜನೆ, ಅಂಗವಿಕಲರ ವಿದ್ಯಾರ್ಥಿ ವೇತನ ಅಂಗವಿಕಲರ ಮಾಶಾಸನ, ಬಸ್‌ಪಾಸ್, ಅಂಗವಿಕಲರ ಗುರುತಿನ ಚೀಟಿ, ಕಾರ್ಯಚಟುವಟಿಕೆಗಳನ್ನು ನಡೆಸಲಾಗುತ್ತಿದೆ (ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ)

ಮಮಇ 49 ಮಮಅ 2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು.

ಪ್ರಶ್ನೆ ಸಂಖ್ಯೆ 421 ಕ್ಕೆ

ಅನುಬಂಧ

ಚಿಕ್ಕಬಳ್ಳಾಪುರ ಜಿಲ್ಲಾ ವ್ಯಾಪ್ತಿಯ ಅಂಗವಿಕಲರ ಮಾಹಿತಿ ಮತ್ತು ವಿವಿಧ ಯೋಜನೆಗಳ ಅನುಷ್ಠಾನದ ಮಾಹಿತಿ.

ಕ್ರ ಸಂ	ತಾಲ್ಲೂಕುಗಳ ಹೆಸರು	ಒಟ್ಟು ಅಂಗವಿಕಲರ ಸಂಖ್ಯೆ	ವಿವಿಧ ಯೋಜನೆಗಳ ಅನುಷ್ಠಾನ							
			ಸಾಧನ ಸಲಕರಣೆ		ಆಧಾರ ಯೋಜನೆ		ಅಂಗವಿಕಲರ ವಿದ್ಯಾರ್ಥಿ ವೇತನ	ಅಂಗವಿಕಲರ ಮಾಶಾಸನ	ಅಂಗವಿಕಲರ ಗುರುತಿನ ಚೀಟಿ	ಬಸ್ ಪಾಸ್
			ಸೈಕಲ್	ವೀಲ್‌ಚೇರ್	ಭೌತಿಕ	ಆರ್ಥಿಕ				
1	ಬಾಗೇಪಲ್ಲಿ	25274	10	12	2	70000	21000	2045	2000	250
2	ಚಿಕ್ಕಬಳ್ಳಾಪುರ		10	12	2	70000	44000	1462	3400	380
3	ಶಿಡ್ಲಘಟ್ಟ		10	12	4	140000	35000	1508	2250	300
4	ಚಿಂತಾಮಣಿ		10	12	4	140000	49000	3052	3050	390
5	ಗೌರಿಬಿದನೂರು		10	12	3	105000	39000	2548	3500	300
6	ಗುಡಿಬಂಡೆ		10	12	1	35000	12000	708	1800	240
	ಒಟ್ಟು	**25274**	**60**	**72**	**16**	**560000**	**200000**	**11323**	**16000**	**1860**